ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.)
ಅಧೀಕ್ಷಕ ಅಭಿಯಂತರರು(ವಿ)
ಕಾರ್ಯ ಮತ್ತು ಪಾಲನಾ ವೃತ್ತ,
ಸೆಕ್ಟರ್ ನಂ:63, ಪ್ಲಾಟ್ ನಂ:110,ನವನಗರ,ಬಾಗಲಕೋಟೆ–03
Tel: 08354/297330, Mob No- 9449877676

HUBLI ELECTRICITY SUPPLY COMPANY LIMITED
(Wholly owned Govt. of Karnataka undertaking)
Superintending Engineer (Ele.)
O & M Circle, Sector No:63, Plot No:110, Navanagar, Bagalkot-03
E-mail ID: seebgkt.hescom@gmail.com
dcabgkt.hescom@gmail.com

Corporate Identity Number(CIN): U31401KA2002SGC030437

ಕ್ರಮ ಸಂಖ್ಯೆ :ಬಿಜಿಕೆ/ಅಅ(ವಿ)/ಉಲೆನಿ/ಸಲೆ/2023–24/ ದಿನಾಂಕ :

<u>ಪೀಠಿಕೆ</u> :

ದಿನಾಂಕ:24.05.2023 ರಂದು ಬೆಳಿಗ್ಗೆ 11.00 ಘಂಟೆಗೆ ಶ್ರೀ ಸಿದ್ದಪ್ಪ ಬಿಂಜಗೇರಿ, ಅಧೀಕ್ಷಕ ಅಭಿಯಂತರರು(ವಿ), ವಿಜಯಪೂರ ಹಾಗೂ ಅಧ್ಯಕ್ಷರು, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ, ವೃತ್ತ ಕಛೇರಿ, ಹೆಸ್ಕಾಂ ಬಾಗಲಕೋಟೆ ರವರ ಅಧ್ಯಕ್ಷತೆಯಲ್ಲಿ ಬಾಗಲಕೋಟೆ ಜಿಲ್ಲೆಯ ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಯ ಸಭೆಯ ನಡಾವಳಿಗಳು.

ಹಾಜರಿದ್ದವರು:1) ಶ್ರೀ ನಾರಾಯಣ ಕಳ್ಳಿಮನಿ, ಕಾರ್ಯನಿರ್ವಾಹಕ ಇಂಜನೀಯರ(ವಿ) ಕಾ ಮತ್ತು ಪಾ ವಿಭಾಗ ಹೆಸ್ಕಾಂ, ಬಾಗಲಕೋಟೆ.
2) ಶ್ರೀ ಸಿ ವಿ ಶಿವಪೂಜಿ, ಸದಸ್ಯರು, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ, ಬಾಗಲಕೋಟೆ
3) ಶ್ರೀ ಎಮ್.ಎಸ್ ದಢೂತಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ಉಪವಿಭಾಗ ಹೆಸ್ಕಾಂ, ರಬಕವಿ.
4) ಶ್ರೀ ಬಸಪ್ಪ ಶಂಕರ ಕಿತ್ತೂರ, ಪೂ:ಯಲ್ಲಟ್ಟಿ ತಾ।। ರಬಕವಿ ಬನಹಟ್ಟಿ ಜಿ।। ಬಾಗಲಕೋಟೆ.

<u>ಪ್ರಕರಣ ಸಂಖ್ಯೆ: 01/2023</u>

ಶ್ರೀ. ಬಸಪ್ಪ ಶಂಕರ ಕಿತ್ತೂರ
ಪ್ರತಿನಿಧಿ: } -------- ದೂರುದಾರರು.

ವಿರುದ್ಧ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ),
ಕಾರ್ಯ ಮತ್ತು ಪಾಲನಾ ಉಪ–ವಿಭಾಗ ಹುವಿಸಕಂನಿ.,
ರಬಕವಿ. } ------- ಪ್ರತಿವಾದಿ

**ವಿಷಯ: "ಹಳೆಯ ವಿದ್ಯುತ್ ತಂತಿಯನ್ನು ಬದಲಾವಣೆ ಮಾಡಿ ಹೊಸ ವಿದ್ಯುತ್ ತಂತಿಯನ್ನು ಹಾಕುವ" ಕುರಿತು.**

*&*&*

ಪ್ರಕರಣ ಸಂಖ್ಯೆ: 01/2023 ರಕ್ಕೆ ಸಂಬಂಧಿಸಿದಂತೆ, ದಿನಾಂಕ:24.05.2023 ರಂದು ಬೆಳಿಗ್ಗೆ 11.00 ಘಂಟೆಗೆ ಶ್ರೀ ಸಿದ್ದಪ್ಪ ಬಿಂಜಗೇರಿ, ಅಧೀಕ್ಷಕ ಅಭಿಯಂತರರು(ವಿ), ವಿಜಯಪೂರ ಹಾಗೂ ಅಧ್ಯಕ್ಷರು, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ, ವೃತ್ತ ಕಛೇರಿ, ಹೆಸ್ಕಾಂ ಬಾಗಲಕೋಟೆ ರವರು ಸಭೆಗೆ ಹಾಜರಿದ್ದ ಎಲ್ಲ ಸದಸ್ಯರು/ಅಧಿಕಾರಿಗಳು/ಗ್ರಾಹಕರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

<u>ಶ್ರೀ. ಬಸಪ್ಪ ಶಂಕರ ಕಿತ್ತೂರ, ಪೂ:ಯಲ್ಲಟ್ಟಿ ತಾ।। ರಬಕವಿ ಬನಹಟ್ಟಿ ಜಿ।। ಬಾಗಲಕೋಟೆ ರವರ ದಿನಾಂಕ:24–05–2023 ರ ಸಭೆಯ ಹೇಳಿಕೆ</u> :

ತೋಟದಲ್ಲಿರುವ 30 ವರ್ಷದ ಹಳೆಯ ವಿದ್ಯುತ್ ತಂತಿಯನ್ನು ಬದಲಾವಣೆ ಮಾಡಿ ಹೊಸ ವಿದ್ಯುತ್ ತಂತಿಯನ್ನು ಹಾಕುವುದು. ತೋಟದಲ್ಲಿರುವ ಹಳೆಯ ವಿದ್ಯುತ್ ತಂತಿ ಹರಿದು ಜೀವ ಹಾನಿಯಾಗುವ ಸಂಭವವಿರುವುದು ಎಂದು ತಿಳಿಸಿರುತ್ತಾರೆ.

ಶ್ರೀ. ಎಮ್. ಎಸ್. ದಢೂತಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ಉಪ-ವಿಭಾಗ ಹೆಸ್ಕಾಂ, ರಬಕವಿ ರವರ ದಿನಾಂಕ:24-05-2023 ರ ಸಭೆಯ ಹೇಳಿಕೆ:

ಅಂದಾಜು ಪತ್ರಿಕೆ ತಯಾರಿಸಿ ವಿಭಾಗ ಕಚೇರಿಯಿಂದ ಮಂಜೂರಾತಿ ಪಡೆಯಲಾಗಿದ್ದು, ಕಾರಣ ವಿಭಾಗದಿಂದ ಹೊಸ ತಂತಿಯನ್ನು ಹಂಚಿಕೆ ಮಾಡಿಕೊಂಡು ಹೊಸ ವಿದ್ಯುತ್ ತಂತಿಯನ್ನು ಅಳವಡಿಸಿಕೊಡಲಾಗುವದೆಂದು ತಿಳಿಸಿರುತ್ತಾರೆ.

ಸದರಿ ವಾದಿ ಪ್ರತಿವಾದಿಗಳ ಹೇಳಿಕೆಗಳನ್ನು ಆಲಿಸಿ, ಮಾನ್ಯ ವೇದಿಕೆಯು ಈ ಕೆಳಗಿನಂತೆ ಆದೇಶ ನೀಡಲಾಗಿದೆ.

## ಆ ದೇ ಶ

ಕ್ರ.ಸಂ:ಬಿಜಿಕೆ/ಅಇಂ(ವಿ)/ಉಲೆನಿ/ಸಲೆ/ಹಿಸ-1/2023-24/2111-2115 ದಿನಾಂಕ: 06 JUN 2023

ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ(ವಿ) ಕಾ ಮತ್ತು ಪಾ ಉಪವಿಭಾಗ ಹೆಸ್ಕಾಂ, ರಬಕವಿ ರವರಿಗೆ ವಿಭಾಗ ಕಚೇರಿಯಿಂದ ಹೊಸ ತಂತಿಯನ್ನು ಹಂಚಿಕೆ ಮಾಡಿಕೊಂಡು ಹಳೆಯ ವಿದ್ಯುತ್ ತಂತಿಯನ್ನು ಬದಲಾವಣೆ ಮಾಡಿ ಹೊಸ ವಿದ್ಯುತ್ ತಂತಿಯನ್ನು ಅಳವಡಿಸಲು ಸೂಚಿಸಿ, ಸದರೀ ಪ್ರಕರಣವನ್ನು ಮುಕ್ತಾಯಗೊಳಿಸಿ ಆದೇಶಿಸಿದೆ.

ಶ್ರೀ ನಾರಾಯಣ ಕಳ್ಳಿಮನಿ
ಕಾರ್ಯನಿರ್ವಾಹಕ ಅಭಿಯಂತರರು(ವಿ),
ಹಾಗೂ ಗ್ರಾ.ಕುಂ.ಕೊ.ನಿ.,ವೇದಿಕೆಯ
ಸದಸ್ಯರು, ಬಾಗಲಕೋಟೆ.

ಶ್ರೀ ಸಿ ವ್ಹಿ ಶಿವಪೂಜಿ, ಸದಸ್ಯರು,
ಗ್ರಾ.ಕುಂ.ಕೊ.ನಿ.ವೇ, ಬಾಗಲಕೋಟೆ.

ಅಧ್ಯಕ್ಷರು,
(ಸಿದ್ದಪ್ಪ ಬಿಂಜಗೇರಿ,)
ಅಧೀಕ್ಷಕ ಅಭಿಯಂತರರು(ವಿ) ವಿಜಯಪೂರ ಹಾಗೂ ಗ್ರಾಹಕರ
ಕುಂದು ಕೊರತೆ ನಿವಾರಣಾ ವೇದಿಕೆ
ಕಾ ಮತ್ತು ಪಾ ವೃತ್ತ ಹುವಿಸಕಂನಿ.,ಬಾಗಲಕೋಟೆ

ಪ್ರತಿಯನ್ನು:
1) ಮುಖ್ಯ ಇಂಜಿನೀಯರ್(ವಿ) ಕಾ ಮತ್ತು ಪಾ ವಲಯ ಹುವಿಸಕಂನಿ., ಬೆಳಗಾವಿ. ರವರ ದಯಾಪರ ಮಾಹಿತಿಗಾಗಿ.
2) ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ.ಅ), ನಿಗಮ ಕಛೇರಿ, ಹುವಿಸಕಂನಿ., ಹುಬ್ಬಳ್ಳಿ ರವರ ದಯಾಪರ ಮಾಹಿತಿಗಾಗಿ.
3) ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ವಿಭಾಗ ಹೆಸ್ಕಾಂ, ಜಮಖಂಡಿ ರವರ ಮಾಹಿತಿಗಾಗಿ.
4) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ಉಪ-ವಿಭಾಗ ಹೆಸ್ಕಾಂ, ರಬಕವಿ ರವರ ಮಾಹಿತಿಗಾಗಿ.
5) ಶ್ರೀ. ಬಸಪ್ಪ ಶಂಕರ ಕಿತ್ತೂರ, ಪೋ:ಯಲ್ಲಟ್ಟಿ ತಾ॥ ರಬಕವಿ ಬನಹಟ್ಟಿ ಜಿ॥ ಬಾಗಲಕೋಟೆ.
6) ಕಛೇರಿ ಪ್ರತಿ/ಪ್ರಧಾನ ಕಡತ